doc-11
T.P-2

Regd No M 1229 | 43rd Year | Sri 'Satyavadi' Mysore | 14—3—1959

ಪ್ರಮುಖ ವರ್ತಮಾನಗಳಿಗೆ
ಅಕ್ಷರ ನೇಯ್ದ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಅಂಬುನಿ ಸಿಂಸ್ಥೇದಾರ್ ಎಂ. ವಿ ಸುಬ್ಬರಾಯುರು [ಬಿತಿ ಪ್ರತಿ3ಪೈ

Protect the cow
ಗೋಸಂರಕ್ಷಣೆ ಮಾಡಿ
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಅಮೇರಿಕ–ಪಾಕಿಸ್ತಾನ ಸೇನಾ ಒಪ್ಪಂದದಿಂದ ಭಾರತಕ್ಕೆ ಆತಂಕ

ಉಪ ಮುಂತ್ರಿ ಹೆಸರಿಗೆ ಹಣ ಕಳುಹಿಸಿದ

ನವ ದೆಹಲಿ 13 — ಬೊಂಬಾಯಿ ನಿಂದ ಕಲ್ಕತ್ತಾಗೆ ಪ್ರಯಾಣ ಮಾಡಿದ ಒಬ್ಬ ದಿಂಡಿಗಲ್‌ನವನು, ಅವಸರ ಕಾರಣ ಟಿಕೇಟು ಪಡೆಯಲಾಗಲಿಲ್ಲವೆಂದು ಕ್ಷಮೆಯಾಚನೆ ನುಡಿ ರೂ 5 ವರೆ ಕಳಿಸಿರುವರೆಂದು ಉಪ ರೈಲ್ವೆ ಮಂತ್ರಿ ಸಾ ನವಾಜ ಖಾನ್ ಪಡೆದರೆಂದು ವಂದಿ

ಜಕಾರ್ತ ಪರಿಸ್ಥಿತಿ ಅಂತ್ಯ

ಕೊಲಂಬೊ 13 — ಸಿಂಹಳದಲ್ಲಿ ಜರುಗಿದ ಪರಿಸ್ಥಿತಿ ಅಂತ್ಯವಾಯಿತು

ಪಾರ್ಲಿಮೆಂಟಿಗೆ ಹೌದು.

ಬೆಂಗಳೂರು 13 — ಕುಂಭಕೋಣಂ ಎಂಬುದು ಪಾರ್ಲಿಮೆಂಟಂ ಎಂದೂ ಸ್ವೀಕರಿಸಿ ತಿಳಿಸಿದರು

ಬಂಧಿಸಿದ್ದಕ್ಕೆ ಟೀಕೆ

ನವ ದೆಹಲಿ 12 — ರುದ್ರ ಮಹಾ ಯಜ್ಞ ನಡೆಸುತ್ತಿದ್ದಾಗ ಹಿಂದೂಮಹಾ ಸಭೆ ಪ್ರಧಾನ ಕಾರ್ಯದರ್ಶಿ ಶ್ರೀ ವಿ ಜಿ ದೇಶಪಾಂಡೆಯವರ ಬಂಧನವನ್ನು ಮುಖ್ಯಮಂತ್ರಿ ಟೀಕಿಸಿದೆ.

ಯಾತ್ರಾ ತೆರಿಗೆ

ಶ್ರೀ ಶಂಣ ಬಸಪ್ಪ ಜಾತ್ರೆಗೆ ಬರುವ ಯಾತ್ರಿಕರ ಮೇಲೆ ದೊಡ್ಡವರಿಗೆ 25 ನಯೆ ಪೈಸೆ, ಮಕ್ಕಳಿಗೆ 12 ನಯೆ ಪೈಸೆ ರಂತೆ ವಿಧಿಸಲಾಗುವದೆಂದು ಗುಲ್ಬರ್ಗ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ತಿಳಿಸಿದ್ದಾರೆ

ಹೊಂಡೆ

ಕೊಲಂಬೊ 13 — ದಕ್ಷಿಣ ಮಾಲ ದೀವ್ ದ್ವೀಪಗಳಲ್ಲಿ ದಂಗೆ ಎದ್ದಿರುವ ಹೊಂಡೆ ವಂದಿ ಇದೆ

ಅಮೇರಿಕವನ್ನು ವಿವರಣೆ ಕೇಳಿದೆ

ನವ ದೆಹಲಿ 13 — ಭಾರತದ ವಿರುದ್ಧವಾಗಿ ಅಮೇರಿಕಾ–ಪಾಕಿಸ್ತಾನ ದ್ವಿಮುಖ ಸೇನಾ ಒಪ್ಪಂದವನ್ನು ಉಪಯೋಗಿಸುವದಿಲ್ಲವೆಂಬ ನಿರ್ದಿಷ್ಟ ಭರವಸೆಯನ್ನು ಅಮೇರಿಕಾ ಕೊಟ್ಟಿರುವದಾಗಿ ಪಾರ್ಲಿಮೆಂಟಿನ ಎಂಡು ಸದಸ್ಯರನ್ನು ಉದ್ದೇಶಿಸಿ ನುಡಿದರು ಈ ಒಪ್ಪಂದದಲ್ಲಿ ರಹಸ್ಯ ಅಂಶಗಳು ಯಾವುವು ಇಲ್ಲವೆಂದು ಅಮೇರಿಕಾ ಅಧಿಕಾರಿಗಳು ಭರವಸೆ ಕೊಟ್ಟಿರುವರೆಂದು ನೆಹರು ತಿಳಿಸಿದರು ಇತರ ದೇಶಗಳಿಂದ ಪಾಕಿಸ್ತಾನ ಪಡೆದ ಸಹಾಯವನ್ನು ಭಾರತದ ವಿರುದ್ಧ ಉಪಯೋಗಿಸುವದಿಲ್ಲವೆಂಬುದನ್ನು ನಿರಾಕರಿಸಲಾಗದೆಂದು ಅವರು ತಿಳಿಸಿ, ಅಮೇರಿಕಾವನ್ನು ಮತ್ತೆ ವಿವರಣೆ ಕೇಳಿದ್ದೇವೆ ಎಂದರು

ವಿದೇಶಿ ನೆರವು

ವಾಷಿಂಗ್ಟನ್ 13 — ವಿದೇಶ ನೆರವಿನ ಯೋಜನೆಗೆ ಅಮೇರಿಕಾ ಅಧ್ಯಕ್ಷ ಐಸೆಹೋವರರು ಕಾಂಗ್ರೆಸನ್ನು 4 ಸಹಸ್ರ ಮಿಲಿಯ ಡಾಲರು ಕೇಳಿದ್ದಾರೆ

ಕದನ ವಿರಾಮ

ಕಲ್ಕತ್ತಾ 13 — ಈ ಮಧ್ಯಾಹ್ನ 4 ಗಂಟೆಗೆ ವಾರ್ಸಿದಾಬಾದು ಜಿಲ್ಲೆಯ ಗಡಿಯಲ್ಲಿ ಭಾರತ-ಪಾಕಿಸ್ತಾನಗಳಲ್ಲಿ ಕದನ ವಿರಾಮವಾಯಿತೆಂದು ಪಶ್ಚಿಮ ಬಂಗಾಳ ಸರ್ಕಾರಕ್ಕೆ ವರದಿ ಬರಿದಿದೆ

ನಾಳೆಯ ಹಂಚಾಂಗ

ಆ॥ ಮಹಾವಿದ್ವಾ ದೈವಜ್ಞ ಶಿಖಾಮಣಿ
ಸಂಪಕ್ಕುಷ್ಣ ಜೋಯಿಸರಿಂದ
15 ಷಷ್ಠಿ ಕೃತಿಕ

ಪಾನನಿರೋಧ ಸಮಿತಿ ರಚನೆ

ಬೆಂಗಳೂರು 12 — ಪಾನಪ್ರತಿಬಂಧ ಪ್ರಾಂತದ ಯಾವ ಯಾವ ಭಾಗದಲ್ಲಿ ಇದೆಯೋ ಅಲ್ಲೆಲ್ಲ ಅದು ಯಶಸ್ವಿ ಆಗಿ ಕೆಲಸ ಮಾಡಲು ತಿಫಾರ್ಸು ಮಾಡುವ ನಿಲುವಾಗಿ ಪಾನಪ್ರತಿಬಂಧ ಸಮಿತಿ ರಚನೆ ಮಾಡಲು ಸರ್ಕಾರ ಯೋಚಿಸುತ್ತಿದೆ ಎಂದು ಅಬ್ಕಾರಿ ಮಂತ್ರಿ ಶ್ರೀ ಎಸ್ ರಾಜಯ್ಯನವರು ವಿಧಾನ ಸಭೆಯಲ್ಲಿ ತಿಳಿಸಿದರು.

ಮೆರವಣಿಗೆ ಉಂಟು

ನವ ದೆಹಲಿ 13 — ಪಂಜಾಬಿನಲ್ಲಿ ಗುರುದ್ವಾರಗಳಲ್ಲಿ ಸರ್ಕಾರದ ಹಸ್ತಕ್ಷೇಪ ಪ್ರತಿಭಟಿಸಿ ಸಡೆಸಬೇಕೆಂದು ನಿರ್ಧರಿಸಿರುವ ಮೆರವಣಿಯನ್ನು ಶಾಂತಿಭಂಗದ ಬಂಧನದ ಕಾರಣ ನಿಲ್ಲಿಸಿಲ್ಲವೆಂದು ಅಖಿಲ ಭಾರತ ಶಿರೋಮಣಿ ಅಕಾಲಿ ದಳದ ಪ್ರಧಾನ ಕಾರ್ಯದರ್ಶಿ ಶ್ರೀ ರಾಜಪಾಲ ಸಿಂಗರು ತಿಳಿಸಿದ್ದಾರೆ.

ಭದ್ರಸ್ಥಿತಿ

ಬೆಂಗಳೂರು 13 — ಈ ದಿನ ವಿಧಾನ ಸಭೆಯಲ್ಲಿ ಆರ್ಥಿಕ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಈ ದಿನ ಹೇಳಿಕೆಯನ್ನಿತ್ತು, ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಭದ್ರವಾಗಿದೆ ಎಂದರು.

ಲಾ ಕಮಿಷನ್

ಬೆಂಗಳೂರು 13 — ಮೈಸೂರಿನಲ್ಲಿ ಲಾ ಕಮಿಷನ್ ರಚನೆ ಆಗಬೇಕೆಂದು ವಿಧಾನ ಸಭೆಯಲ್ಲಿ ಸದಸ್ಯರು ತಿಳಿಸಿದರು.

× ಕೇರಳದಲ್ಲಿ ಕಡ್ಡಾಯ ರಾಷ್ಟ್ರಭಾಷಾ ಶಿಕ್ಷಣ ಬರಲಿದೆ

ಪ್ರಪಂಚದ ನದಿಗಳ ಅಧ್ಯಯನ

ಪ್ರಪಂಚದ ಸುಮಾರು 65 ದೊಡ್ಡ ನದಿಗಳಿಂದ ಪ್ರವಾಹ ಕುರಿತ ಮಾಹಿತಿಗಳು ಮತ್ತು ನೀರಿನ ಎಂಡು ಲೀಟರು ಸ್ಯಾಂಪಲುಗಳು ರಾಜಧಾನಿ ವಾಷಿಂಗ್ಟನ್ನಿನ ಜಿಯೊಲಾಜಿಕಲ್ ಸರ್ವೇ ಎಭಾಗಕ್ಕೆ ಬಂದು ತಲಸಲಾರಂಭಿಸಿವೆ : ಇದು ನೀರಿನ ಎಷ್ಟಂಶ ಸಾಗರಗಳಿಗೆ ಹರಿಯುತ್ತಿದೆ ಮತ್ತು ಈ ನದಿಗಳು ಭೂಮಿಯು ಎಷ್ಟಂಶವನ್ನು ಕರಗಿದ ಘನಪದಾರ್ಥಗಳ ರೂಪದಲ್ಲಿ ಕೊಂಡೊಯ್ಯುತ್ತವೆ ಎಂಬುದನ್ನು ತಿಳಿದು ಕೊಳ್ಳುವ ಪ್ರಪಂಚವ್ಯಾಪಿ ಪ್ರಯತ್ನದ ಅಂಗವಾಗಿರುತ್ತದೆ — ನದಿಗಳು ಕೊಂಡೊಯ್ಯುವ ಕರಗದ ಘನ ಪದಾರ್ಥಗಳ ಒಟ್ಟು ಪ್ರಮಾಣದ ಕುರಿತ ಅಂದಾಜುಗಳ ಪೈಕಿ ಅತ್ಯುತ್ತಮ ಅಂದಾಜುಗಳ ಮೇರೆಗೆ ನದಿಗಳು ಗಂಟೆಗೆ 280000 ದಿಂದ 450000 ಟನ್ನುಗಳಷ್ಟು ಒಯ್ಯುತ್ತವೆ ಎಂದು ತಿಳಿದುಬರುತ್ತದೆ — ನದಿಗಳು ಮಿನಿಟಿಗೆ 18 ಸಾವಿರ ದಶಲಕ್ಷ ಗ್ಯಾಲನ್ನುಗಳಷ್ಟು ನೀರನ್ನು ಸಾಗರಗಳಿಗೆ ತಳ್ಳುತ್ತವೆ : ಈ ಅಂಕೆಸಂಖ್ಯೆಗಳು ಕೇವಲ ಅಂದಾಜುಗಳಾಗಿವೆ — ಒಂದು ವರ್ಷದೊಳಗೆ ನೀರಿನಲ್ಲಿ ಕಂಡುಬರುವ ಸುಮಾರು 20 ಮುಖ್ಯ ಲವಣಾಂಶಗಳ ವಿಷಯವಾಗಿ ಮಾತ್ರವೇ ಅಲ್ಲದೆ ಸ್ವಲ್ಪ ಪ್ರಮಾಣದಲ್ಲಿ ಕಂಡು ಬರುವ ಸುಮಾರು 25 ಧಾತುಗಳ ವಿಷಯವಾಗಿಯೂ ನಾವು ಅರ್ಥಪೂರ್ಣ ಮಾಹಿತಿಗಳನ್ನು ಗಳಿಸುವ ನಿರೀಕ್ಷೆಯಲ್ಲಿದ್ದೇವೆ ಎಂದು ಸರ್ವೇ ಕೆಮಿಸ್ಟರು ಹೇಳುತ್ತಾರೆ — ಆಯ್ಕೆ ಮಾಡಿದ 65 ನದಿಗಳು, ಸಾಗರಗಳಿಗೆ ಹರಿದುಹೋಗುವ ಒಟ್ಟು ಪ್ರವಾಹಗಳ ಶೇಕಡ 75 ಅಂಶವಾಗಿರುತ್ತದೆ.

ನಿಂಬೇಗಿಡಗಳಿಗೆ ಸಾಮಾನ್ಯತಃ ಬರುವ ಮಾಲ್ಸಿಕೋ ರೋಗ ನಿವಾರಣೆಗಾಗಿ ಜಾರ್ಜಿಯದ ವಿಜ್ಞಾನಿಗಳು ಶಬ್ದಾತೀತ ಯಾಂತ್ರಸಾಧನವನ್ನು ಬಳಸಿ ಯಶಸ್ವೀ ಪ್ರಯೋಗವನ್ನು ನಡೆಸಿದ್ದಾರೆ.

ಗೂಢ ಪ್ರಾಣಿ ಪ್ರಪಂಚ ಕ್ಷೇತ್ರದಲ್ಲಿ ಗುಳ್ಳೇನರಿಗಳ ಆಹಾರಕ್ಕೆ ಸೂಕ್ಷ್ಮ ಲಾಲಾಣುಗಳನ್ನು ಬೆರೆಸುವ ಮೇಲೆ ಹೆಣ್ಣು ನರಿಗಳು ಹೆಚ್ಚು ವರ್ಣಗಳನ್ನು ಪ್ರಕಟಪಡಿಸಿದವು — ರೀಗ್ ಪ್ರಾಯೋಗಿಕ ಅನ್ವಾಂಗ ಕಾರ್ಖಾನೆಯು ಅತ್ಯುಷ್ಣ ಪಶುಪ್ರಜನನ ಸಂಶೋಧನಾಲಯದ ಬೇಡಿಕೆಯ ಪ್ರಕಾರ ಈ ಸೂಕ್ಷ್ಮ ಲಾಲಾಣುಗಳ ಲವಣವನ್ನು ತಯಾರಿಸುತ್ತಿದೆ ; ಇವುಗಳನ್ನು ನೇವಿನಲ್ಲಿ ಬೆರೆಸಿ ಬಳಸುವುದರಿಂದ ಅತ್ಯುಷ್ಣದ ಸಾಮೂಹಿಕ ಮತ್ತು ರಾಜ್ಯಚಾಲಿತ ಕೃಷಿ ಕ್ಷೇತ್ರಗಳಿಗೆ ಈ ವರ್ಷ ಎರಡು ಕೋಟಿ ರೂಬಲುಗಳಷ್ಟು ಅಧಿಕ ಆದಾಯ ಬರುವುದೆಂದು ಅಂದಾಜು ಮಾಡಲಾಗಿದೆ

ಪಕ್ಕದ ಚಿತ್ರ

1 ಅಮೆಜಾನು ನದಿಯ ವೇಗವು ಬಹಳ ಹೆಚ್ಚು : ಅದು ಅಟ್ಲಾಂಟಿಕ್ ನೀರನ್ನು 100 ಮೈಲಿಗಳವರೆಗೂ ಹೊರದು ಮಾಡುತ್ತಿರುತ್ತದೆ.

3 ಒಂದು ಗಿಡವು ಸಾಯುವವರೆಗೂ ಬೆಳೆಯುತ್ತಲೇ ಇರುತ್ತದೆಂದು ನಿಪುಣರು ಹೇಳುತ್ತಾರೆ ; ಗಿಡಗಳು ರೋಗ ಮತ್ತು ಪೆಟ್ಟಿನಿಂದ ಮಾತ್ರ ಸಾಯುತ್ತವೆನ್ನುವ ಸಸ್ಯಶಾಸ್ತ್ರವಿಶಾರದರು ನುಡಿಯುತ್ತಾರೆ.

3 ಉತ್ತರ ಧ್ರುವವನ್ನು 9158 ರ ಆಗಸ್ಟ 3 ರಂದು ಅಮೇರಿಕಾ ನ್ಯೂಕ್ಲಿಯರು ಶಕ್ತಿಯ ಸಬ್‌ಮೆರೀನು ತಲಪಿದ ವರಿಗೆ ಸಮುದ್ರದಲ್ಲಿ ಹೋಗುವ ಯಾವ ಹಡಗೂ ತಲಪಿರಲಿಲ್ಲ.

ಗೋಕ್ಷಣ, ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋಕ್ಷಣ ಪತ್ರಿಕೆಗೆ ಬೆಂಬಲಿಗರಾಗಿರಿ

ವುಡ್‌ಲಾಂಡ್ 13-3-59 ರಿಂದ
ಲಿ ನ್ ಅಮೋಘ ಆರಂಭ

— ನವಕೇತನ ಪರಂ —

ಕಾಲಾಪಾನಿ (ಹಿಂದಿ)

ಅತ್ಯುತ್ತಮ ಪತ್ತೇದಾರಿ ಕಥಾವಸ್ತು — | ದಿನ 3 ಪ್ರದರ್ಶನಗಳು

ಬಹಳ ದಿನಗಳಿಂದಲೂ ಎದುರುನೋಡುತ್ತಿದ್ದ ಚಿತ್ರ

ತಾರಾಗಣ— ದೇವ್‌ಆನಂದ್, ವಹೀಬಾಲ, ನಳಿನಿಜಯವಂತ್, ಕಿಶೋರ್‌ಸಾಹು

ದಿಗ್ದರ್ಶನ ರಾಜ್ ಖೋಸ್ಲ — ನೋಡಲು ಮರೆಯಬೇಡಿ — ಸಂಗೀತ ಎಸ್. ಡಿ ಬರ್ಮನ್

ಅಪೆರಾ— 14-3-59 ರಿಂದ

ಅಮೋಘ ತೆಲುಗು ಚಿತ್ರ ಪ್ರತಿದಿನ 3 ಆಟಗಳು

ಸಂತೋಷಂ

ಪಾತ್ರ— ಎನ್ ಟಿ ರಾಮರಾವ್, ಅಂಜಲಿ, ನಾಗೇಂದ್ರರಾವ್, ಲೇಲಂಗಿ



ಎಲ್ಲ ವಿಧದ ಆಯುರ್ವೇದ ಔಷಧಗಳಿಗೂ ಅಶೋಕಾ ಫಾರ್ಮಸಿ ಅಶ್ವಿನ್ಸ್‌ಡಾಕ್ ಬಜಾರ್ ಮೈಸೂರು

For Quality Printing
L. N. Press
Mysore

Edited Printed & Published by Dharma Prachara Nirata M S Krishna Rao at the Satyavadi Press Chamarajapuram, Mysore